# ಪ್ರಯೋಗಮುಖಿಯ ಸಿನಿಮೀಯ ಅಂತ್ಯ

**ನಿರ್ದೇಶಕ ಗುರುಪ್ರಸಾದ್ ಆತ್ಮವಿಶ್ವಾಸದ ಅಲೆಗಳ ಮೇಲೆ ಕೂತಂತೆಯೇ ಸದಾ ಮಾತನಾಡುತ್ತಿದ್ದರು. ಅವರೀಗ ನೇಣು ಕುಣಿಕೆಗೆ ಸಿಲುಕಿ ಜೀವ ಕಳೆದುಕೊಂಡು ಸಿನಿಮೀಯ ಅಂತ್ಯದ ದುರಂತ ನಾಯಕ!**

■ ವಿಶಾಖ ಎನ್.

'ಅವೆಲ್ಲ ನಿರ್ದೇಶಕ ಅರ್ಥಾತ್ ನನ್ನ ತಲೆಯಲ್ಲಿನ ಪಾತ್ರಗಳು. ಅವುಗಳ ಎದುರು ಕುಳಿತು ನಿರ್ದೇಶಕನೇ ಮಾತನಾಡುವ ಚಿತ್ರಣವೊಂದು ಇದೆ. ಅದನ್ನು ನೀವು ಸೂಕ್ಷ್ಮವಾಗಿ ಗಮನಿಸಿದರೆ ಗೊತ್ತಾಗುತ್ತದೆ'– 'ಡೈರೆಕ್ಟರ್ ಸ್ಪೆಷಲ್' ಸಿನಿಮಾ ತೆರೆಕಂಡ ಮೇಲೆ ಗುರುಪ್ರಸಾದ್ ಅನೌಪಚಾರಿಕವಾಗಿ ಮಾತನಾಡುತ್ತಾ ಹೀಗೆ ಹೇಳಿಕೊಂಡಿದ್ದರು. ತೆರೆಯ ಮೇಲೆ ಖುದ್ದು ಕಾಣಿಸಿಕೊಳ್ಳುವ ಉಮೇದು ಅವರಿಗೆ ಅದಾಗಲೇ ಬಂದಿತ್ತು. ಅಷ್ಟೇ ಅಲ್ಲ, ನಿರ್ದೇಶಕ ಮನಸ್ಸು ಮಾಡಿದರೆ ಯಾವ ಪಾತ್ರವನ್ನು ಏನು ಬೇಕಾದರೂ ಮಾಡಬಲ್ಲ ಎನ್ನುವ ಅಹಮಿಕೆಯ ಭಾವವೊಂದನ್ನು ಅವರು ಆ ದಿನ ಪದೇಪದೇ ದಾಟಿಸಿದ್ದರು. ಸಿನಿಮಾದಲ್ಲಿ ಖುದ್ದು ನಿರ್ದೇಶಕ ಪ್ರತ್ಯಕ್ಷನಾಗಿ, ಪ್ರೇಕ್ಷಕರ ಹಾಗೂ ಪಾತ್ರಗಳ ಜೊತೆಗೆ ಒಡನಾಡುವ ಆತ್ಮವಿಶ್ವಾಸವನ್ನೋ ಅಥವಾ ನಿರೂಪಣಾ ದಾರ್ಷ್ಟ್ಯವೊಂದನ್ನೋ ಅವರು ಅಷ್ಟು ಬೇಗ ಪ್ರದರ್ಶಿಸಿದ್ದರು.

ಕನ್ನಡದ ಜನಪ್ರಿಯ ಚಿತ್ರಗಳ ಭಿತ್ತಿ ಇದಮಿತ್ಥಂ ಎನ್ನುವಂತೆ ಇರಬೇಕು ಎಂದು ನಾಯಕರು ನಿರ್ಧರಿಸುತ್ತಿದ್ದ ಜಾಯಮಾನಕ್ಕೆ ಹೊರತಾಗಿ ಕಥನ ಕಟ್ಟುವ ಉಮೇದಿನಿಂದ ಚಿತ್ರರಂಗಕ್ಕೆ ಬಂದಿದ್ದವರು ಗುರುಪ್ರಸಾದ್. ಕನಕಪುರದ ಅರ್ಚಕರೊಬ್ಬರ ಮಗನಾದ ಅವರು ಶಿಸ್ತಿನಿಂದ ಓದಿ ಸಂಪಾದಿಸಿದ್ದ ಒಳ್ಳೆಯ ಕೆಲಸವನ್ನು ಬದಿಗೊತ್ತಿ, ಹತಾಶ ಪ್ರೇಕ್ಷಕನ ಪ್ರತಿಕ್ರಿಯಾತ್ಮಕ ಧ್ವನಿ ಹೊಮ್ಮಿಸುವುದಾಗಿ ಹೇಳಿಕೊಂಡು 'ಮಠ' ಸಿನಿಮಾ ಮಾಡಿದರು. ಮೂರು ಚಿತ್ರಗಳಿಗೆ ಆಗುವಷ್ಟು ಮಾತನ್ನು, ಕಥಾಭಿತ್ತಿಯನ್ನು, ಇಡುಕಿರಿದ ಪಾತ್ರಗಳನ್ನು ಆ ಸಿನಿಮಾ ಒಳಗೊಂಡಿತ್ತು. ಎಲ್ಲ ಪಾತ್ರಗಳೂ ವಾಚಾಳಿಗಳು. ಮಠದ ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಪಾತ್ರಧಾರಿ ಸುದರ್ಶನ್ ಅವರದ್ದಷ್ಟೇ ಅಲ್ಲಿ ಹೆಚ್ಚಿನ ಮೌನ.

ಆ ಸಿನಿಮಾ, ಕನ್ನಡ ಸಿನಿಮಾ ಮಟ್ಟಿಗೆ ಹೊಸ ನಿರೂಪಣಾ ಮಾದರಿ ಕಟ್ಟಿಕೊಟ್ಟಿತು; ಅದೂ ಭಿಡೆಯಿಲ್ಲದೆ. ಅಲ್ಲಿನ ಪಾತ್ರಗಳು ದ್ವಂದ್ವಾರ್ಥದ ಮಾತನ್ನು ಢಾಳಾಗಿಯೇ ಆಡಿದವು. ಸಿದ್ದಗಂಗಾ ಶ್ರೀಗಳನ್ನು ಹೋಲುವ ಪಾತ್ರವೊಂದನ್ನು ಸೃಷ್ಟಿಸಿ, ಅದನ್ನೂ ಗೇಲಿ ಮಾಡುವ ಮಟ್ಟದ ದೃಶ್ಯವೊಂದನ್ನು ಕೂಡ ಗುರುಪ್ರಸಾದ್ ಪೋಣಿಸಿದ್ದರು.

ಅವರು ಕಟ್ಟಿದ್ದು ನಿರ್ದಿಷ್ಟ ಹೂಗಳನ್ನು ಒಳಗೊಂಡ ಮಾಲೆಯನ್ನಲ್ಲ. ಮಲ್ಲಿಗೆಯ ನಡುವೆ ಅವರು ಸಂಪಿಗೆ ಇಟ್ಟರು. ಇನ್ನೂ ಮುಂದೆ ಹೋಗಿ, ಅಲ್ಲಲ್ಲಿ ಪರಿಮಳವೇ ಇಲ್ಲದ ಕಾಕಡಗಳನ್ನೂ ಸೇರಿಸಿಬಿಟ್ಟರು. ಮಲ್ಲಿಗೆ ಪರಿಮಳಕ್ಕೂ ಸಂಪಿಗೆಯ ಗಾಢ ಸುವಾಸನೆಗೂ ಎತ್ತಣಿಂದೆತ್ತ ಸಂಬಂಧವಯ್ಯ ಎಂದು ಯಾರಾದರೂ ಕೇಳಿದರೆ, ಅವರು ಮುಗಿಬೀಳುತ್ತಿದ್ದರು. ತಾವೇ ಸುಗಂಧರಾಜ ಎಂದು ಸಂವಾದವನ್ನು ತಮ್ಮದೇ ಶೈಲಿಯ ಪರಾಕಾಷ್ಠೆಯ ಮೇಲೆ ಕುಳಿತು ನಡೆಸುವಷ್ಟು ಆತ್ಮವಿಶ್ವಾಸ ಇತ್ತು.

ಗುರುಪ್ರಸಾದ್ ಅವರ ಮೊದಲ ಇನಿಂಗ್ಸ್ 'ಮಠ'. ಎರಡನೇ ಇನಿಂಗ್ಸ್ 'ಎದ್ದೇಳು ಮಂಜುನಾಥ'. ಅದು ಮಾತಿನಲ್ಲೇ ಮಂಟಪ ಕಟ್ಟಿದ್ದ ಚಿತ್ರ. ವಿಡಂಬನೆಯ ಒರತೆಯಂತೆ ಸಾಗುವ ಮೊದಲರ್ಧ, ಗಂಭೀರ ಸ್ವರೂಪ ತಳೆಯುವ ಎರಡನೇ ಅರ್ಧದಿಂದಾಗಿ ಅದರಲ್ಲಿ ಮಾಗಿದ ಗುರು ಕಾಣಿಸಿದ್ದರು. 'ಡೈರೆಕ್ಟರ್ ಸ್ಪೆಷಲ್' ಅವರ ನಿರ್ದೇಶನದ ಮೂರನೇ ಸಿನಿಮಾ. ಅದರಲ್ಲಿ ಅವರಿಗೆ ನಿರ್ದೇಶಕನ ಟೋಪಿ ತಲೆಗೆ ಅಂಟಿಕೊಂಡುಬಿಟ್ಟಿತ್ತು. ಕೊನೆಕೊನೆಗೆ ಸಿನಿಮಾ ಏನೇನೋ ಆಗಿಹೋಗಿತ್ತು. ಆದರೆ, ಧನಂಜಯ ಎಂಬ ನಟ ರಾಕ್ಷಸನಿಗೆ ಆ ಚಿತ್ರ ಒಂದು ಸಶಕ್ತ ಪ್ರಯೋಗಶಾಲೆಯಾಗಿ ಒದಗಿಬಂದಿದ್ದು ಗಮನಾರ್ಹ. 'ಎರಡನೇ ಸಲ' ಬರುವ ಹೊತ್ತಿಗೆ ಗುರುಪ್ರಸಾದ್ ವಿಡಂಬನೆಯ ಹಾದಿಯು ಚೇಷ್ಟೆಯ ಅತ್ಯಾತ್ಮವಿಶ್ವಾಸವಾಗಿ ಬದಲಾಗಿತ್ತು. 'ರಂಗನಾಯಕ'ದಲ್ಲಿ ಸೂತ್ರ ಹರಿದುಕೊಂಡ ಗಾಳಿಪಟವನ್ನು ಹಾರಿಸುವ ಮಟ್ಟಕ್ಕೆ ಅದೇ ಅತ್ಯಾತ್ಮವಿಶ್ವಾಸ ಅವರನ್ನು ಇಳಿಸಿಬಿಟ್ಟಿತ್ತೆನ್ನುವ ವಿಶ್ಲೇಷಣೆಗೆ ಕಾರಣಗಳು ಸಿಗುತ್ತವೆ.

52ನೇ ವಯಸ್ಸಿನ ಹೊತ್ತಿಗೆ ಗುರುಪ್ರಸಾದ್ ಸಿನಿಮೀಯ ಬದುಕು ಮುಕ್ತಾಯ ಕಂಡಿದೆ. ಇದೊಂದು ರೀತಿ ಫಾರ್ಮ್ ಕಳೆದುಕೊಂಡ ಬ್ಯಾಟ್ಸ್‌ಮನ್ ಒಬ್ಬ ಪುನರುತ್ಥಾನಗೊಳ್ಳಲು ಕಮ್ಮಟಕ್ಕೂ ಒಡ್ಡಿಕೊಳ್ಳದ ಮನಸ್ಥಿತಿ ತಲುಪಿದಂತಹ ಪ್ರಸಂಗ. ಎರಡು ಮದುವೆ, ಪದೇಪದೇ ಬದಲಿಸಿದ ಬಾಡಿಗೆ ಮನೆಗಳು, ಮೈತುಂಬಾ ಮಾಡಿಕೊಂಡಿದ್ದ ಸಾಲ, ಆನ್‌ಲೈನ್ ಆಟದ ಗೀಳಿಗೆ ಬಿದ್ದಿದ್ದರೆಂಬ ಆರೋಪ... ಹೀಗೆ ಏನೇನೋ ಅವರ ಅಂತ್ಯದೊಟ್ಟಿಗೇ ಪ್ರತಿಧ್ವನಿಸುತ್ತಿವೆ. ಪ್ರಯೋಗಶೀಲ ನಿರ್ದೇಶಕನೊಬ್ಬ ಸರಿಯಾಗಿ ಗಾರ್ಡ್ ತೆಗೆದುಕೊಳ್ಳದೆ ಕಣಕ್ಕಿಳಿದ ಬ್ಯಾಟ್ಸ್‌ಮನ್ ತರಹ ಆಗಿಬಿಟ್ಟರೇ ಎನ್ನುವ ಪ್ರಶ್ನೆಯನ್ನು ಅವರ ಅಗಲಿಕೆ ಉಳಿಸಿದೆ. ■

